## ಬಸವನಿಗೂ ಬಂತು ಕ್ಯೂಆರ್ ಕೋಡ್



ಡಿಜಿಟಲ್ ಯುಗದ ಈ ದಿನಮಾನದಲ್ಲಿ ಸಣ್ಣಪುಟ್ಟ ವ್ಯಾಪಾರಿಗಳು ಕ್ಯೂಆರ್ ಕೋಡ್ ಸ್ಕ್ಯಾನರ್ ಮೂಲಕ ಗ್ರಾಹಕರೊಂದಿಗೆ ವ್ಯವಹಾರ ಮಾಡುತ್ತಿದ್ದಾರೆ. ಇಂಥವರ ಸಾಲಿಗೆ ಹೊಸ ಸೇರ್ಪಡೆ ಎಂಬಂತೆ ದಾನ ಬೇಡಿ ಬರುವ ಕೋಲೆಬಸವ ಹಾಗೂ ಅವುಗಳ ಮಾಲೀಕರು ಸೇರಿದ್ದಾರೆ. ಈಚೆಗೆ ಬೆಂಗಳೂರಿನ ರಾಜರಾಜೇಶ್ವರಿ ನಗರದ ವಸತಿ ಸಮುಚ್ಚಯವೊಂದರಲ್ಲಿ ಅಲಂಕೃತಗೊಂಡ ಬಸವಣ್ಣನನ್ನು ಕಂಡೆ. ಬಸವನಿಗೆ ಅಲ್ಲಿಯ ನಿವಾಸಿಗಳು ಪೂಜಿಸುತ್ತಾ, ಅಕ್ಕಿ ಬೆಲ್ಲವನ್ನು ಸಮರ್ಪಿಸುತ್ತಿದ್ದರು. ಅದನ್ನು ಗಮನಿಸಿದಾಗ ಬಸವನ ಮೈಮೇಲೆ ಕ್ಯೂಆರ್ ಕೋಡ್ ಕಾಣಿಸಿಕೊಂಡು ಅಚ್ಚರಿ ಮೂಡಿಸಿತ್ತು. ಹಣ ಸಹಾಯ ಮಾಡಲು ಬಸವನ ಬೆನ್ನಿಗೆ ಕ್ಯೂಆರ್ ಕೋಡ್ ಸ್ಕ್ಯಾನರ್ ಅಂಟಿಸಲಾಗಿತ್ತು. ಇದನ್ನು ಸ್ಕ್ಯಾನ್ ಮಾಡಿ ಹಲವರು ಹಣ ಸಹಾಯ ಮಾಡಿದರು. ವಿದೇಶದಲ್ಲಿ ನೆಲೆಸಿರುವ ನನ್ನ ಬಂಧುಗಳೊಬ್ಬರು ನಗದು ರಹಿತ ವ್ಯಾಪಾರದಲ್ಲಿ ವಿದೇಶಗಳಿಗಿಂತ ನಮ್ಮ ದೇಶವೇ ಮುಂದು ಎನ್ನುವ ಮಾತು ಹೇಳಿದ್ದು ಈ ಸಂದರ್ಭದಲ್ಲಿ ನೆನಪಾಯಿತು.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ



## ಬಾದಾಮಿಯ ಬೆಡಗಿನ ದಿಡಗು

ಅಗಸ್ತ್ಯ ತೀರ್ಥದ ಉತ್ತರಕ್ಕೆ ಭವ್ಯವಾದ ಬಂಡೆಗಳು, ರಣಮಂಡಲ ಕೋಟೆ, ಶಿವಾಲಯಗಳು, ದಕ್ಷಿಣಕ್ಕೆ ವಾಸ್ತುಶಿಲ್ಪದ ಖನಿಯಾಗಿರುವ ಮನಮೋಹಕ ಗುಹಾಲಯಗಳು, ಪಶ್ಚಿಮದ ದಡದಲ್ಲಿರುವ ಎಲ್ಲಮ್ಮನ ಗುಡಿ, ಪೂರ್ವಕ್ಕೆ ನೀರಿನಲ್ಲಿ ತೇಲುವಂತೆ ಕಾಣುವ ಭೂತನಾಥ ಗುಡಿಗಳ ಸಂಕೀರ್ಣ, ಕುಷ್ಟುರಾಯನ ಗುಡಿ, ಮಧ್ಯ ವಿಶಾಲ ಜಲಾಶಯ. ಈ ವರ್ಷದ ಧಾರಾಕಾರ ಮಳೆಯಿಂದಾಗಿ ಗುಡ್ಡ ಮಡ್ಡಿಗಳಿಗೆಲ್ಲಾ ಹಸುರಿನ ಹೊದಿಕೆ. ನಸುಗೆಂಪು ಬಣ್ಣದ ಬಂಡೆಗಳ ಗುಡ್ಡದ ಮೇಲ್ಭಾಗದಲ್ಲಿ ವಿಸ್ತಾರವಾದ ಸಮತಟ್ಟಾದ ಪ್ರದೇಶ. ಇದು ಅಗಸ್ತ್ಯ ತೀರ್ಥದತ್ತ ಸ್ವಲ್ಪ ಇಳಿಜಾರಾಗಿದೆ. ಬಿಡದೇ ಜಡಿಮಳೆ ಸುರಿದಾಗ ಸಂಗ್ರಹವಾಗುವ ನೀರು ಅಬ್ಬರಿಸುತ್ತ ಅಗಸ್ತ್ಯ ತೀರ್ಥದತ್ತ ಹರಿದು ಬರುವುದು. ಕಡಿದಾದ ಬಂಡೆಗಳ ಮೇಲೆ ಬೀಳುವ ದಿಡಗು (ಅಲ್ಪಾಯು ಜಲಪಾತ) ನಯನ ಮನೋಹರ.

ಸುಮಾರು 250 ಅಡಿಗಳಿಂದ ಬೀಳುವ ನೀರು ಬಂಡೆಗಳಿಗೆ ಅಪ್ಪಳಿಸಿದಾಗ ಮುತ್ತಿನ ಮಣಿಗಳನ್ನು ತೂರಿದಂತೆ ಕಾಣುವ ದೃಶ್ಯ ಆಕರ್ಷಣೀಯ. ಕಲ್ಲು ಬಂಡೆಗಳ ಸಂದಿಗೊಂದಿಗಳಲ್ಲಿ ಸದ್ದು ಮಾಡುತ್ತ ನೊರೆಯಾಗಿ ಹರಿದು ಬರುವ ಜಲಧಾರೆ ಹಾಲಿನ ಹೊಳೆಯಂತೆ ಕಾಣುವುದು. ದಿಡಗಿನ ಮಗ್ಗಲು ಜವಳು ನೆಲದಲ್ಲಿ 'ಊಟಿ' ಕೀಳುವುದರಿಂದ ಕಾಣುವ ಚಿಮ್ಮುವ ಕಾರಂಜಿಗಳ ವೈವಿಧ್ಯಮಯ ವಯ್ಯಾರ ವರ್ಣಿಸಲಸದಳ. ಈ ಬೆಡಗಿನ ದಿಡಗಿನ ಬಗ್ಗೆ ಚಾಲುಕ್ಯರ ತಾಮ್ರದ ಶಾಸನವೊಂದು ಉಲ್ಲೇಖಿಸಿದೆ. ಗುಡ್ಡದ ಮೇಲಿಂದ ಅಬ್ಬರಿಸುತ್ತ ಧರೆಗಿಳಿಯುವ ಈ ಜಲಧಾರೆ ಎರಡು ಕವಲುಗಳಾಗಿ ಹರಿದು ಬರುವುದು. ಹೀಗಾಗಿ ಸ್ಥಳೀಯರು ಇದಕ್ಕೆ 'ಅಕ್ಕ ತಂಗಿ ದಿಡಗು' ಎಂದು ಕರೆಯುತ್ತಾರೆ. ಈ ವರ್ಷದ ಮಳೆ ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಆದರೆ, ಬಾದಾಮಿಯಲ್ಲಿ ಬೆಡಗಿನ ದಿಡಗಿಗೆ ಮರುಹುಟ್ಟು ನೀಡಿದೆ.

–ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ

## ಆಟೊ ಬಿಡಿ ಭಾಗಗಳಿಂದ ತಯಾರಿಸಿದ 'ನವಿಲು'

ಆಂಧ್ರಪ್ರದೇಶದ ವಿಜಯವಾಡ ನಗರದ ಹೃದಯಭಾಗದಲ್ಲಿರುವ ರಾಜೀವ್ ಗಾಂಧಿ ಉದ್ಯಾನ ಪ್ರವಾಸಿಗರ ಮೆಚ್ಚಿನ ತಾಣ. ಪ್ರಕೃತಿ ಪ್ರಿಯರಿಗಿಂತಲೂ ಮಕ್ಕಳಿಗೆ ಇದು ನಿಜವಾದ ಕನಸಿನ ಲೋಕ. ಇಲ್ಲಿ ಕಾಲ ಕಳೆದರೆ ನಿರಾಳತೆಯೂ ಸಿಗುತ್ತದೆ. ನವೀನತೆಗೂ ಸಾಕ್ಷಿಯಾಗಿದೆ. ಉದ್ಯಾನದ ವೈವಿಧ್ಯಮಯ ಸಸ್ಯ ಸಂಗ್ರಹ, ಡೈನೊಸಾರ್ ಮತ್ತು ಇತಿಹಾಸಪೂರ್ವ ಪ್ರಾಣಿಗಳ ಪ್ರತಿಕೃತಿಗಳು, ಮಕ್ಕಳ ಆಟದ ಪ್ರದೇಶ ಎಲ್ಲವೂ ಗಮನ ಸೆಳೆಯುತ್ತವೆ. ಆದರೆ, ಇವೆಲ್ಲವಕ್ಕಿಂತಲೂ ಹೆಚ್ಚು ಪ್ರವಾಸಿಗರನ್ನು ಸೆಳೆಯುವುದು—ಒಂದು ನವಿಲಿನ ಪ್ರತಿಕೃತಿ.

ಇದು ಸಾಮಾನ್ಯ ಶಿಲ್ಪವಲ್ಲ. ಪೂರ್ತಿಯಾಗಿ ಆಟೋಮೊಬೈಲ್‌ಗಳ ಹಳೆಯ ಬಿಡಿಭಾಗಗಳಿಂದ ತಯಾರಿಸಿದ ಈ ನವಿಲು, ಬಣ್ಣಗಳ ಬಳಕೆ ಹಾಗೂ ಯಥಾರ್ಥದ ರೂಪದಲ್ಲಿ ನಿರ್ಮಾಣಗೊಂಡಿರುವುದರಿಂದ ದೂರದಿಂದಲೇ ನಿಜವಾದ ನವಿಲು ಎಂಬ ಭ್ರಮೆ ಮೂಡಿಸುತ್ತದೆ. ಉದ್ಯಾನಕ್ಕೆ ಬರುವ ಮಕ್ಕಳು, ಯುವಕರು, ವೃದ್ಧರು ಈ ಶಿಲ್ಪದೊಂದಿಗೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸುತ್ತಾರೆ. ಇದು ಕೇವಲ ಶಿಲ್ಪವಲ್ಲ, ಅನುಪಯುಕ್ತ ವಸ್ತುಗಳಿಂದ ಮೂಡಿದ ಕಲಾತ್ಮಕ ಶಕ್ತಿ. ಈ ಕಲಾಕೃತಿಯ ಹಿಂದಿರುವ ಕಲಾವಿದನ ಕ್ರಿಯಾಶೀಲತೆ, ಅಭಿವ್ಯಕ್ತಿಯ ಶಕ್ತಿ, ಪರಿಸರದ ಪರಿಪಾಲನೆಯೊಡನೆ ಕಲೆಯ ಸಂಯೋಜನೆ – ಎಲ್ಲವನ್ನೂ ಮೆಚ್ಚಿಸುವಂತದ್ದು. ಪರಿಸರಸ್ನೇಹಿ ಶಿಲ್ಪಕಲೆಗೆ ಈ ನವಿಲು ಜೀವಂತ ಸಾಕ್ಷಿಯಾಗಿದೆ.

–ಜಿ. ಪದ್ಮಾ, ಸಂಡೂರು

